MOTION TO ELECT MEMBERS TO THE SENATE OF THE BANGALORE UNIVERSITY

Sri D. DEVARAJ URS (Chief Minister).—I beg to move :

"That this Assembly do proceed to elect SIX members to the SENATE OF BANGALORE UNIVERSITY according to the principle of proportional representation by means of single transferable vote as required under sub section (1) of Section 18 of the Bangalore University Act, 1964."

MADAM SPEAKER —Motion moved :

"That this Assembly do proceed to elect SIX members to the Senate of Bangalore University according to the principle of proportional representation by means of single transferable vote as required under sub-section (1) of section 18 of the Bangalore University Act, 1964",

I will put the motion to the vote of the House.

"That this Assembly do proceed to elect Six members to the Senate of Bangalore University according to the principle of proportional representation by means of single transferable vote as required under sub-section (1) of section 18 of the Bangalore University Act, 1964".

The motion was adopted

The Calendar of events will be announced later.

Matters under Rule 312

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷಣಿಯವರೇ ರೂಲ್ ನಂಬರ್ 312 ಪ್ರಕಾರ ನಾನು ತಮಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಇದೇ ವಿಷಯದಲ್ಲಿ ಶ್ರೀಮಾನ್ ದೇವೇಗೌಡರು ಒಂದು ನೋಟಿಸನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ನನ್ನ ಅಕ್ಷೇಪಣೆ ಏನೂ ಇಲ್ಲ. ಕಳೆದ ಅಧಿವೇಶನದಲ್ಲಿ ಒಂದು ವಿಷಯ ಪ್ರಸ್ತಾಪಕ್ಕೆ ಬಂದಿತ್ತು. ಅದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರದಲ್ಲಿ ಮಾಡಿರತಕ್ಕ ಭಾಷಣ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಸಾಕಷ್ಟು ಚರ್ಚೆ ನಡೆಯಿತು. ವಿರೋಧಪಕ್ಷದವರಾದ ನಾವು ಈ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಬೇಕೆಂದು ಪ್ರಯತ್ನ ಮಾಡಿದೆವು ಆದರೆ ಇದಕ್ಕೆ ಸರ್ಕಾರದ ಕಡೆಯಿಂದ ಒಪ್ಪಿಗೆ ದೊರೆಯಲಿಲ್ಲ. ಅನೇಕ ಜನ ವಿರೋಧ ಪಕ್ಷದ ಮಾನ್ಯ ಸದಸ್ಯರು ಈ ಬಿಜಾಪುರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಭಾಷಣದ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ನೋಟೀಸಿನಲ್ಲಿ ರುಜು ಮಾಡಿ ಅದನ್ನು ತಮಗೆ ಕಳುಹಿಸಿದ್ದೇವೆ. ಅದರೂ ಸಹ ಇದನ್ನು ಕಳೆದ ಅಧಿವೇಶನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಕಳೆದ ಅಧಿವೇಶನ ಅನಿರೀಕ್ಷಿತವಾಗಿ ಮುಂದುವರೆಯಿತು. ಆದ್ದರಿಂದ ಈಗಲಾದರೂ ಈ ವಿಷಯವನ್ನು ದಯಮಾಡಿ ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕಳುಹಿಸಿದ ನೋಟೀಸ್ ನನಗೆ ಇವೊತ್ತು ಬೆಳಿಗ್ಗೆ 8-25 ಕ್ಕೆ ಬಂದಿದೆ. ಅದನ್ನು ಸರ್ಕಾರಕ್ಕೆ ಕಳುಹಿಸಬೇಕು. ಇದೆಲ್ಲಾ ತಮಗೆ ಗೊತ್ತಿರುವ ಪ್ರೊಸೀಜರ್.

Sri S. BANGARAPPA.—To be a little over cautious we have sent that one. ಈ ವಿಷಯ ಕಳೆದ ಅಧಿವೇಶನದಲ್ಲಿಯೇ ಚರ್ಚೆಗೆ ಬರಬೇಕಾಗಿತ್ತು.

ಅಧ್ಯಕ್ಷರು.—ಹೋದಸಾರಿ ಕೊಟ್ಟಿದ್ದು ರ್ಯಾಪ್ಸ್ ಆಗುತ್ತೆ. ಹೊಸದಾಗಿ ನೋಟೀಸ್ ತೆಗೆದು ಕೊಂಡು ಬರಬೇಕು.

ಶ್ರೀ ಎಸ್. ಬಂಗಾರಪ್ಪ:—ನಾನು ಈ ದಿವಸ ಬೆಳಿಗ್ಗೆ 8-30ರ ಒಳಗೇ ತಮಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೋಟೀಸ್ 5 ನಿಮಿಷ ಮುಂಚಿತವಾಗಿ ಬಂದಿರಬಹುದು. ಆದರೆ ಅದನ್ನು ಸರ್ಕಾರಕ್ಕೆ ಕಳುಹಿಸುವುದಕ್ಕೆ ಸಾಧ್ಯವಾಗಿಲಲ್ಲ.

ಶ್ರೀ ಎಸ್. ಬಂಗಾರಪ್ಪ,—ಇದೇನು ಹೊಸ ವಿಷಯವಲ್ಲ. ಕಳೆದ ಸಾರಿ ಈ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಸಾವು ಕೇಳಿದ್ದೆವು. ಈ ಬಗ್ಗೆ 3-4 ದಿವಸ ಚರ್ಚೆ ನಡೆದಿದೆ ಈ ದೃಷ್ಟಿಯಿಂದ ಈ ವಿಚಾರ ಗೊತ್ತಿರುವುದರಿಂದ ಈಬಗ್ಗೆ ಚರ್ಚೆ ಮಾಡುವುದಕ್ಕೆ ಅವ ಕಾಶವನ್ನು ಕೊಟ್ಟು ನಂತರ ಈ ಸಭೆಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಎಷ್ಟೋ ವಿಚಾರಗಳು ಗೊತ್ತಿರುತ್ತವೆ. ಆದರೆ ಅವೆಲ್ಲವೂ ಈ ಸದನದಲ್ಲಿ ಬರು ವುದಕ್ಕೆ ಸಾಧ್ಯವಾಗುವುದಿಲ್ಲ. In the rules it is said after the speaker has given the consent, at such time and date the speaker may fix' ಈ ನೋಟೀಸ್ ನನಗೆ ಬಂದಿದೆ. ನನಗೆ ಸ್ವಲ್ಪ ಅವಕಾಶ ಕೊಡಿ. ನೋಟೀಸ್ ಕೊಟ್ಟಮೇಲೆ ಅವನ್ನು ಅಜೆಂಡಾದಲ್ಲಿ ಸೇರಿಸುವುದು ನನ್ನ ಕೆಲಸ ಅದನ್ನು ಮಾಡೋಣ.

ಶ್ರೀ ಎಸ್. ಎಂ. ಕೃಷ್ಣ.—ರೂಲ್ 312 ಪ್ರಕಾರ ಟೈಮ್ ಫಿಕ್ಸ್ ಮಾಡತಕ್ಕದ್ದು ಅಧ್ಯಕ್ಷರಿಗೆ ಸೇರಿದ್ದು.

ಶ್ರೀ ಕೋಣಂದೂರು ಲಿಂಗಪ್ಪ.—ಈ ವಿಷಯ ಕಳೆದ ಅಧಿವೇಶನದಲ್ಲಿ ಬಂದಿವೆ. ಇದೇನು ಹೊಸ ವಿಷಯವಲ್ಲ. ಆದ್ದರಿಂದ ಇದಕ್ಕೆ ಟೈಮ್‌ಲಿಮಿಟ್ ಬೇಡ,

ಅಧ್ಯಕ್ಷರು.— ಕಳೆದ ಅಧಿವೇಶನದಲ್ಲಿ ಬಂದದ್ದು ಮುಗಿದುಹೋಯಿತು,

ಶ್ರೀ ಎಸ್. ಬಂಗಾರಪ್ಪ.—ಈಗ ತಾವು ಅದಕ್ಕೆ ಪುನರ್‌ಜನ್ಮ ಕೊಡಬೇಕು.

ಅಧ್ಯಕ್ಷರು.—ನೋಟೀಸ್ ಕೊಟ್ಟಮೇಲೆ ಅದನ್ನು ಅಜೆಂಡಾದಲ್ಲಿ ಸೇರಿಸಬೇಕು. ಈ ವಿಷಯ ವನ್ನು ಸರ್ಕಾರಕ್ಕೆ ತಿಳಿಸಬೇಕು. ಆದ್ದರಿಂದ ಕಾರಾವಕಾಶಬೇಕು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ದೇವೇಗೌಡರು ಕಳೆದ ಅಧಿವೇಶನದಲ್ಲಿ ಹೇಳಿದ್ದು ರಾಜ್ಯದ ಜನತೆಗೇ ಗೊತ್ತಿದೆ. ಇದೇನು ಹೊಸ ವಿಷಯವಲ್ಲ.

ಶ್ರೀ ಡಿ. ದೇವರಾಜ ಅರಸ್.—ಈಗ ರೂಲ್ 312ರ ಪ್ರಕಾರ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದಾರೆ. ಅದರ ಪ್ರಕಾರ ಪ್ರೊವೀಡಾಗುವುದಕ್ಕೆ ಯಾವ ಅಭ್ಯಂತರವು ಇಲ್ಲ ಎಂದು ತಾವು ಹೇಳುವಾಗ ಪುನಹ ಪುನಹ ನೋಟೀಸು ಕಳುಹಿಸಿದಾಗ ಒಂದು ಸಾರಿ ಮಾತನಾಡುವುದು, ಆ ಮೇಲೆ ಇನ್ನೊಂದು ಸಾರಿ ಮಾತನಾಡುವುದು ಏತಕ್ಕೆ ಮಾಡಬೇಕು ? ಇದು ನರಿಯಲ್ಲ. ಈಗ ರೂಲ್ ಕೋಟ್ ಮಾಡಿ ಅವರು ನೋಟೀಸ್ ಕಳುಹಿಸಿದ್ದಾರೆ. ರೂಲ್ 312ರ ಪ್ರಕಾರ ಕಳುಹಿಸಿರ ತಕ್ಕಷ್ಟೆ ನೋಟೀಸನ್ನು ನಾನು ಗಮನಕ್ಕೆ ತೆಗೆದುಕೊಂಡಿದ್ದೇನೆ ಅದನ್ನು ಅಜೆಂಡಾದಲ್ಲಿ ಸೇರಿಸು ತ್ತೇನೆ ಎಂದು ತಾವು ಹೇಳಿದ ಮೇಲೆ ಟೈಮ್ ಫಿಕ್ಸ್ ಮಾಡತಕ್ಕದ್ದು ಅಧ್ಯಕ್ಷರಿಗೆ ಬಿಟ್ಟದ್ದು. ಹಿಂದೆ ಕೊಟ್ಟಿದ್ದು ಎಲ್ಲಾ ರ್ಯಾಪ್ಸ್ ಆಗಿ ಹೋಯಿತು ಎಂದು ತಾವು ಹೇಳಿದ್ದೀರಿ. ಈಗ ಹೊಸದಾಗಿ ನೋಟೀಸ್ ಕೊಟ್ಟಿರುವುದು ರೂಲ್ಸ್ ಪ್ರಕಾರ ಪ್ರೊಸೀಜರೆಲ್ಲಾ ಆಗಬೇಕು ಈಗ ಆ ವಿಷಯವನ್ನು ತೆಗೆದುಕೊಂಡು ಏನೇನೋ ಮಾತನಾಡುವುದಕ್ಕೆ ಹೋದರೆ ಸಭೆಯ ಕಾರ್ಯಕಲಾಪಗಳು ಸ್ಥಗಿತ ವಾಗುತ್ತವೆ. ಆದ್ದರಿಂದ ಮಾನ್ಯ ಸದಸ್ಯರು ದಯಮಾಡಿ ಮುಂದಿನ ಕಾರ್ಯಕಲಾಪಗಳು ನಡೆಯುವುದಕ್ಕೆ ಸಹಕರಿಸಬೇಕು.

10-00 A. M.

ಶ್ರೀ ಎಚ್. ಡಿ. ದೇವೇಗೌಡ —ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ರೂಲ್ 312ರ ಕೆಳಗೆ ಯಾವುದೇ ಮೋಷನ್ ಈ ಸಭೆಯಲ್ಲಿ ಎತ್ತುವುದ್ದಕ್ಕೆ ಅವಕಾಶವಿದೆ. ಅದರ ಬಗ್ಗೆ ಇದುವರೆಗೆ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯಗಳೂ ಸಹ ಇವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ 30-35 ವರ್ಷಗಳ ಅನುಭವ ಇರುವ ಹಾಗೆ ನನಗೂ 15-20 ವರ್ಷಗಳ ಅನುಭವವಿದೆ. ನೋಟೀಸ್ ಕೊಟ್ಟಮೇಲೆ ಅಜೆಂಡಾದಲ್ಲಿ ಅದನ್ನು ನಿಗದಿಮಾಡಿ. ಅಂದಮೇಲೆ ಈ ರೂಲಿನ ಬಗ್ಗೆ ಒಂದು ಮೋಷನ್ನನ್ನು ತೆಗೆದುಕೊಳ್ಳುವುದು ಈಗ ಹೊಸದೇನೂ ಅಲ್ಲ. ಅನೇಕಸಾರಿ ಅಜೆಂಡಾದಲ್ಲಿ ನೋಟೀಸ್ ಕೊಟ್ಟ ನಂತರ ಕೆಲವು ವಿಷಯಗಳನ್ನು ಸೇರಿಸಿರುವ ನಿದರ್ಶನಗಳೂ ಇವೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಆ ದಿವಸವೇ ನೋಟೀಸ್ ಕೊಟ್ಟು ಈ ಸಭೆಯಲ್ಲಿ ತಮ್ಮ ಅನುಮತಿಯಿಂದ ಚರ್ಚೆಮಾಡುವುದಕ್ಕೆ ಅನುವು ಮಾಡಿ ಕೊಟ್ಟಿರುವ ನಿದರ್ಶನಗಳೂ ಸಹ ಇವೆ. ಹಿಂದಿನ ಅಧ್ಯಕ್ಷರುಗಳು ಎಷ್ಟೋ ಸಾರಿ ಇಂತಹ ಮೋಷನ್‌ಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆಮಾಡುವುದಕ್ಕೆ ಅನುವು ಮಾಡಿ ಕೊಟ್ಟಿರುವುದೂ ಇದೆ. ಅಂತಹ ಒಂದು ಸಂಪ್ರದಾಯದಂತೆ ಇವತ್ತು ಇದನ್ನು ಚರ್ಚೆಮಾಡುವುದಕ್ಕೆ ತಾವು ಒಂದು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ನಾನು ಅದರ ಬಗ್ಗೆ ಆಗಲೇ ಹೇಳಿದ್ದೇನೆ. ನನಗೆ ಇವತ್ತು ಮಾನ್ಯ ಸದಸ್ಯರ ನೋಟೀಸ್ ಬೆಳಿಗ್ಗೆ 8.25ಕ್ಕೆ ಬಂದಿದೆ.

ಶ್ರೀ ಎಸ್. ಡಿ. ದೇವೇಗೌಡ —ಈ ಸಭೆಯಲ್ಲಿ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯ ಏನಿದೆಯೋ ಅದನ್ನು ಇವತ್ತು ಅಡಾಪ್ಟ್ ಮಾಡಬಹುದು.

ಅಧ್ಯಕ್ಷರು.—ನಾನು ಆ ವಿಷಯವನ್ನು ಆಗಲೇ ಹೇಳಿದ್ದೇನೆ. ಇದರ ಬಗ್ಗೆ ಚರ್ಚೆಮಾಡಲು ಅನುವು ಮಾಡಿ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ್, —ಈ ವಿಚಾರದಲ್ಲಿ ಪ್ರಾಮುಖ್ಯತೆ ಕೊಡುತ್ತೇನೆಂದು ಹೇಳಿರಿ ಆದ್ದರಿಂದ ಇವತ್ತೇ ಆ ವಿಷಯದಲ್ಲಿ ಪ್ರಾಮುಖ್ಯತೆ ಕೊಡಬೇಕು.

ಅಧ್ಯಕ್ಷರು.—ಇವತ್ತೇ ಈ ಘಳಿಗೆ, ಈ ಸೆಕೆಂಡ್, ಈ ವಿಷಯದಲ್ಲಿಯೇ ಇದರ ಬಗ್ಗೆ ತೀರ್ಮಾನ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆ ರೀತಿ ಮಾಡಲು ಈ ಸಭೆಯಲ್ಲಿ ಅವಕಾಶವಿಲ್ಲ. ಅದಕ್ಕೂ ಒಂದು ನೀತಿ ನಿಯಮವು ಇವೆ. ಆ ಪ್ರಕಾರ ನಾವೆಲ್ಲರೂ ಹೋಗಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವೇನೂ ನಿಮ್ಮನ್ನು ಒತ್ತಾಯ ಮಾಡುತ್ತಾ ಇಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಿಮಗೆ ಈ ವಿಚಾರವಾಗಿ ಮಾತನಾಡಲು ಅನುವು ಮಾಡಿ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಆ ರೀತಿಯಾಗಿ ಅನುವು ಮಾಡಿಕೊಡುವುದಕ್ಕೆ ಸಾಧ್ಯವಿದೆ. ಒಂದು ಸಾರಿ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡಿದ ಮೇಲೆ ಪುನಃ ಅದೇ ವಿಚಾರವಾಗಿ ಕಾರ್ಯವನ್ನು ಗೊತ್ತುಮಾಡುವುದಕ್ಕೆ ಮತ್ತೆ ಕೆಲವು ಎಡರುತೊಡರುಗಳು ಬರುತ್ತವೆ. ಇವತ್ತು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಇವತ್ತಿನ ಸಭೆ ಮುಗಿಯುವುದರೊಳಗೆ ಇದರ ಬಗ್ಗೆ ಮಾತನಾಡಲು ನಮಗೆ ಅನುವು ಮಾಡಿಕೊಡಬೇಕು.

ಅಧ್ಯಕ್ಷರು.—ಇವತ್ತಿನ ಅಜೆಂಡಾದಲ್ಲಿ ಬೇರೆ ವಿಷಯವನ್ನು ಹಾಕಿದ್ದೇವೆ. ಈಗಾಗಲೇ ಅಜೆಂಡಾ ಪ್ರಕಾರ ಸಭಾ ಕಾರ್ಯಕಲಾಪಗಳು ನಡೆಯುತ್ತಿವೆ. ಆದ್ದರಿಂದ ಇವತ್ತಿನ ಈ ವಿಚಾರವನ್ನು ನಾಳೆಯ ದಿವಸದ ಅಜೆಂಡಾದಲ್ಲಿ ಸೇರಿಸಬಹುದು,

ಶ್ರೀ ಕಾಗೋಡು ತಿಮ್ಮಪ್ಪ.—ಇದರಿಂದ ಏನೊಂದು ತೊಂದರೆ ಬರುತ್ತದೆಂದರೆ..... ಇವತ್ತು ನಾವು ಈಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಮಾಡುವುದನ್ನು ತೆಗೆದುಕೊಂಡರೆ.....

ಅಧ್ಯಕ್ಷರು.—ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಮಾಡುವದಕ್ಕೆ ಮುಂಜೆ ಇದನ್ನು ತೆಗೆದ ಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಅದು ನನಗೆ ಗೊತ್ತು. ಅದರೆ ತಾವು ನಾನು ಹೇಳುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿಲ್ಲವೆಂದು ತಾವೆಲ್ಲರೂ ಮನಸ್ಸು ಮಾಡಿದ್ದೀರೆಂದು ನನಗೆ ಕಾಣುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.--ಆ ಕಡೆಯವರು ನಮ್ಮನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆಂದು ನನಗೆ ತೋರುತ್ತದೆ. ಕಳೆದ ಅಧಿವೇಶನ ಅಕಸ್ಮಾತ್ತಾಗಿ ಏಕ್‌ದಂ ಮುಕ್ತಾಯಗೊಂಡಿತು. ಮುಕ್ತಾಯವಾದಂಥ ರೀತಿ ನನಗೆ ಚೆನ್ನಾಗಿ ಗೊತ್ತು.

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ಸದಸ್ಯರು ಆ ರೀತಿ ಆದುದೇಕೆ ಏನ್ನುವುದನ್ನು ಈಗ ಸಭೆಯಲ್ಲಿ ಹೇಳಲಿ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಈಗ ಅವರ ಸವಾಲು, ನಮ್ಮ ಸವಾಲು ವಿಸಯುವುದಾಗಿದೆ. ಈ ವಿಚಾರದ ಬಗ್ಗೆ ಒಳಗೆ ಏನಿದೆಯೋ ನನಗೆ ಗೊತ್ತಾಗಲಿಲ್ಲ. ಇದು ಆಕಾಶಕ್ಕೆ ಬೇಲಿ ಹಾಕಿದ ಹಾಗೆ ಆಗುತ್ತದೆ.

ಅಧ್ಯಕ್ಷರು.—ನಾಳೆಯವರೆಗೂ ಸ್ವಲ್ಪ ಕಾಯಿರಿ. ಇದನ್ನು ನಾಳೆಯ ಅಜೆಂಡಾದಲ್ಲಿ ಸೇರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಆಗ ವಿರೋಧ ಪಕ್ಷದ ನಾಯಕರ ಬುಟ್ಟಿಯಲ್ಲಿ ಏನಿದೆಯೆಂಬುದು ಗೊತ್ತಾಗುತ್ತದೆ.

ಅಧ್ಯಕ್ಷರು—ರೂಲ್ಸ್ ಪ್ರಕಾರ ನಾವೆಲ್ಲರೂ ಕೆಲಸ ಮಾಡಬೇಕು. ನಾಳೆಯ ದಿನದ ಅಜೆಂಡಾದಲ್ಲಿ ಇದನ್ನು ಸೇರಿಸುತ್ತೇನೆ. 312ನೇ ರೂಲ್ಸ್ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದಿನ ಅಧಿವೇಶನ ಹಂತದಲ್ಲಿ ಮುಕ್ತಾಯವಾಯಿತೋ .....

ಅಧ್ಯಕ್ಷರು.—ಸೂರ್ಯ ಮುಳುಗಿ ಹೋಯಿತು ಅಂದಮೇಲೆ ಆ ಸೂರ್ಯ ಮತ್ತೆ ತಿರುಗಿ ಹುಟ್ಟಬೇಕಷ್ಟೇ. ಈ ಅಜೆಂಡಾ ಪ್ರಕಾರ ಇರುವ ಕಾರ್ಯಕ್ರಮಗಳನ್ನು ಮುಂದುವರಿಸೋಣ.

ಶ್ರೀ ಎಸ್. ಬಂಗಾರಪ್ಪ.—ನನಗೆ ಈ ಸಭೆಯ ಕಾಲವನ್ನು ವ್ಯರ್ಥ ಕಳೆಯಬೇಕೆಂಬ ಉದ್ದೇಶವಿಲ್ಲ. ಒಂದು ಸಲಹೆ ಮಾನ್ಯ ಶ್ರೀ ದೇವೇಗೌಡರ ವಿಷಯವೇನಿದೆಯೋ ಅದನ್ನು ರೂಲ್ಸ್ 312ರ ಪ್ರಕಾರ ತೀರ್ಮಾನಮಾಡಿ. ತಾವು ಹೇಳಿದ ಹಾಗೆ ಮಾನ್ಯ ಶ್ರೀ ದೇವೇಗೌಡರ ವಿಷಯವನ್ನು ನಾಳೆಯ ಅಜೆಂಡಾದಲ್ಲಿ ಹಾಕಿಕೊಂಡು ಇತ್ತೀಚಿನ ವಿಷಯವನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಿ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಚೆಕ್ಕಿಕರ್ ಡಿಫಿಕಲ್ಟೀಸ್ ಬರಬಹುದು. ನಾಳೆಯೇ ಆ ವಿಚಾರವನ್ನು ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದಮೇಲೆ ನಾಳೆಯೇ ತೆಗೆದುಕೊಳ್ಳಿ. ಆದರ ಬಗ್ಗೆ ನನ್ನದೇನೂ ಅಡ್ಡಿ ಇಲ್ಲ.

Alleged Ill treatment of the President of the State N. G. O'S Association

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದು ಮಾನ್ಯ ಶ್ರೀ ದೇವೇಗೌಡರಿಗೆ ಸಂಬಂಧಪಟ್ಟುದಲ್ಲ. ತಾವೂ ನಹ ಇವತ್ತಿನ ಪತ್ರಿಕೆಗಳಲ್ಲಿ ಓದಿದ್ದೀರೆಂದು ನಾನು ಭಾವಿಸುತ್ತೇನೆ. ಮಾನ್ಯ ಶ್ರೀ ಚನ್ನಬಸಪ್ಪನವರು ಎನ್.ಜಿ.ಓ. ಅಸೋಸಿಯೇಷನ್ನಿನ ಅಧ್ಯಕ್ಷರು ಒಬ್ಬ ಎಂ. ಎಲ್. ಎ. ಜೊತೆಯಲ್ಲಿ ಅವರನ್ನು ನೋಡಲು ಹೋದಾಗ ಇನ್‌ಸಲ್ಟ್ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ಇವತ್ತು ಬಂದಿದೆ. ಇದು ಸೀರಿಯಸ್ ಅಬ್‌ಜಕ್ಷನ್. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದ ಎಕ್ಸ್‌ಪ್ಲನೇಷನ್ ಈ ಸಭೆಯಲ್ಲಿ ಕೊಡಿಸುವುದು ಅತ್ಯಂತಾವಶ್ಯಕ. ನಮಗೆ ಇದರ ಬಗ್ಗೆ ನೋಟೀಸ್ ಕಳುಹಿಸುವುದಕ್ಕೆ ನಾಕಷ್ಟು ಅವಕಾಶವಿಲ್ಲ. ಆ ವಿಚಾರ ಇವತ್ತು ಬೆಳಿಗ್ಗೆ ಪತ್ರಿಕೆಗಳಲ್ಲಿ ಬಂದಿದೆ

ಶ್ರೀ ಕೆ. ಎನ್. ವೀರಪ್ಪಗೌಡ— ಅದರ ಬಗ್ಗೆ ಅವರು ನೋಟೀಸ್ ಕೊಡಲಿ.

ಅಧ್ಯಕ್ಷರು.—ನೋಟೀಸ್ ಕೊಟ್ಟಕೂಡಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ನಮ್ಮ ಕಡೆ ಯಾರಾದರೂ ಮಾತನಾಡುವುದಕ್ಕೆ ನುರು ಮಾಡಿದರೆ ಮಾನ್ಯ ಶ್ರೀ ವೀರಪ್ಪಗೌಡರು ಏತಕ್ಕೆ ಮಾತನಾಡುತ್ತಾರೋ ಗೊತ್ತಿಲ್ಲ.